ಹೋಗ್ಬೇಕು ಅಂತ ಹೇಳ್ದಂಗಾತಲ್ಲ? ನಮ್ ಹಿಂದಿನವ್ರು ಪಟ್ಟ ಪಾಡು, ಗಳ್ಸಿದ್ದು ಎಲ್ಲಾನು ಹೋಗ್ಬೇಕು ಅಂದಂಗಾತಲ್ಲ? ನನ್ನ ಮೈಯಾಗ ಹಾಡ್ಗಳಿದ್ದಾವ... ನಾನು ವೇದಿಕೆ ಮೇಲೆ ಹಾಡೋ ಮೊದ್ಲು, ಕೆಲವೊಮ್ಮೆ ಫ್ಯಾಮಿಲಿ ಕಾರ್ಯಕ್ರಮದೊಳಗ ಹಾಡಾಕ ಕುಂತ್ರೆ ನಮ್ಮ ನೆಂಟರಿಷ್ಟರುಗಳು 'ನಮ್ ಮೈಯಾಗದಾವ್ರಿ ಹಾಡು... ಮತ್ತೆ ನಮ್ ಹುಡ್ಗಿ ಹಾಡ್ದೇ ಹೆಂಗಿರ್ತಾಳೆ...' ಅನ್ನವ್ರು. ಇದು ತುಂಬ ಜಾತಿಭಾರ ಹೊತ್ಕೊಂಡ ಮಾತು... ನಾನು ಚೌಡಿಕಿ ಹಿಡಿದ್ರೆ, ನುಡಿಸಾಕ ಹಲಗಿ ಎತ್ತಿದ್ರೆ ನಮ್ ತಂದಿಗೆ ಬಹಳ ನೋವಾಗ್ತಿತ್ತು, 'ಒಂದಿಡೀ ಪೀಳಿಗೆ ಹೋರಾಟಗಾರರು, ಚಿಂತಕರು... ಅದ್ರಿಂದ ಎಷ್ಟ್ ದೂರ ಬರ್ಬೇಕು ಅಂತ ಒದ್ದಾಡಿದ್ರೂ ನೀನು ಅದೇ ಕೊಚ್ಚೆ ಒಳ್ಗ ಸಾಯ್ಬೇಕಂತಿ...' ಅನತಿದ್ರು. ಈಗ ಅವ್ರ ಈ ಆಲೋಚ್ನೆ ಬದಲಾಗ್ಯದ. ಆದ್ರ ಅವ್ರಿಗೆ ಹಂಗ್ಯಾಕನ್ನಸ್ತಿತ್ತು ಅಂದ್ರ, ಅವ್ರ ಮನ್ಸಿಗೆ ಅಷ್ಟು ದೊಡ್ ಪೆಟ್ಟು ಬಿದ್ದಾದ. ಈಗ ನಾನು ಈ 'ಫಾರ್ಮ್' ಬಳಸ್ತಿರೋದು ಆ ಪೆಟ್ಟನ್ನ, ನೋವನ್ನ ಮುಟ್ಟದ, ಇದು ನನ್ನ ಸಮುದಾಯಕ್ಕೇ ಆಗಿರಾ ನೋವೂ ಹೌದು, ಅದನ್ನ ನಾನು ನನ್ನ ಸಮುದಾಯದ ಹೃದಯಕ್ಕೆ ತುಂಬ ಹತ್ರ ಇರೋ ಪ್ರಕಾರ ಬಳಸಿ ಮಾತಾಡ್ತ ಇದ್ದೀನಿ...

...ಹಂಗಾಗಿ ಇದು ನನ್ನೊಳಗ ಪ್ರತಿದಿನ ಪ್ರಶ್ನೆ ಎಬ್ಬಿಸ್ತಾನೆ ಇರ್ತದ: ನಾನು ಯಾರಿಂದ ಈ ಹಾಡು ತಕ್ಕೊಂಡೆ? ಎಲ್ಲಿ ಬಳಸ್ದೆ, ಯಾಕ ಬಳಸ್ದೆ, ಅದಕ್ಕ ಎಷ್ಟು ರೊಕ್ಕ ತಗೊಂಡೆ ಇತ್ಯಾದಿ ಇತ್ಯಾದಿ. ನನ್ನ ಫ್ರೆಂಡ್ ಒಬ್ಳು ಈ ಹಾಡನ್ನ ಬಳಸ್ಕೊಂಡು ಆಲ್ಬಮ್ ಮಾಡಿದ್ಳು. ನಾ ಆಕಿನ ಇದ್ರ ಬಗ್ಗೆ ಕೇಳ್ದೆ, ಅವಳಂದ್ಲು, 'ಅವ್ರು ಫ್ರೀ ಆಗಿ ಹೇಳ್ಕೊಟ್ಟಾರ, ಇದ್ರಾಗ ಹಕ್ಕಿನ ಪ್ರಶ್ನೆ ಏನೂ ಬರಲ್ಲಲ... ಇನ್‌ಸ್ಪೈರ್ ಆಗಿ ನಾ ಅದ್ನ ಬಳಸಿನಿ ಅಷ್ಟೆ' ಅಂತ. ಆಕಿ ಹೇಳಾದು ಸರಿ ಅದ. ಹಿಂಗೆ ಇನ್‌ಸ್ಪೈರ್ ಆಗಿ 'ಸಾದಿರ್' ಇದ್ದಿದ್ದು 'ಭರತನಾಟ್ಯ' ಆಯ್ತಲ್ಲ... ಇದನ್ನ ಹೆಂಗೆ ನಿಲ್ಲಿಸ್ತಿರಿ? ನಾನು ಮೇಲ್ಜಾತಿಯಿಂದ, ಮೇಲ್ವರ್ಗದಿಂದ ಬಂದಿನಿ, ಮತ್ತು ನಂಗಿರೋ ಈ ಅಧಿಕಾರದಿಂದನಾ ಇವೆಲ್ಲ ಸಿಕ್ಯಾವ ಅನ್ನಾದ್ನ ಯಾರಾರು ಹೇಳ್ಬೇಕಲ್ಲ? ಆದ್ರ, ನಂಗನ್ನೋದು ಇದ್ರ ಬಗ್ಗೆ ಪಶ್ಚಾತ್ತಾಪ ಪಡೋ ಬದ್ಲು ನಿಮಗೆ ಸಿಕ್ಕಿರೋ ಅನುಕೂಲದ ಬಗ್ಗೆ ಓಪನ್ ಆಗಿ ಹೇಳ್ಕೋಳ್ರಲ... ಇದು ಹಿಂಗಾಗ್ಯದ, ಹಂಗಾಗ್ಯದ ಅಂತ ದೂರೋ ಬದ್ಲು, ನೀವು ಏನನ್ನ ಎಲ್ಲಿಂದ ಕಲಿತ್ರಿ ಅಂತ ಹೇಳೋದ್ರಾಗ ತಪ್ಪೇನದ? ನಮ್ಮ ಹಿಂದಿನವ್ರು ನೋವು ಪಟ್ಟಾರ, ನೋವು ಕೊಟ್ಟಾರ, ಆ ಭಾರಾನ ನಾನು ಸಹಿಸ್ಕೊಬೇಕು... ಅಂಬೇಡ್ಕರ್ ವಿಚಾರಗಳ್ನ, ಮಾರ್ಕ್ಸ್ ವಿಚಾರಗಳ್ನ ಇಟ್ಕೊಂಡು ನಾನು ಏನಿದ್ದೀನೋ ಅದನ್ನ ಸ್ಪಷ್ಟವಾಗಿ, ಸತ್ಯವಾಗಿ ಜನ್ರ ಮುಂದೆ ಇಡ್ತಿನಿ ಅನ್ನೋದಕ್ಕ ಆತ್ಮವಿಶ್ವಾಸ ಬೇಕು ತೇಜಶ್ರೀ...

**◆ ಈ ದಾರಿನಲ್ಲಿ ನಿಮಗೆ ಏನಾದ್ರು ತೊಂದರೆಗಳಾಗಿದ್ದಾವ...**

ಹೌದೌದು... ನಾನು ನನ್ನ ರಾಜಕೀಯ ನಿಲುವುಗಳ್ನ, ವಿಚಾರಗಳ್ನ ನೇರ ಹೇಳೋದ್ರಿಂದ ತುಂಬ ಜನ ನಂಗೆ ಮೇಲ್ ಮಾಡಿ, 'ನೀನು ಮಾವೋವಾದಿ, ನೀನು ಭಯೋತ್ಪಾದಕಿ', 'ನಾವು ಕನ್ನಡಿಗರು, ಕನ್ನಡದಾಗ ಮಾತಾಡ್ಬೇಕು, ನೀವು ಜನಪದ ಹಾಡಾಡ್ತೀನಿ ಅಂತೀರಿ, ಯಾಕೆ ಸೀರೆ ಉಡಾಂಗಿಲ್ಲ? ಯಾಕೆ ಸ್ಲೀವ್‌ಲೆಸ್ ಹಾಕ್ತಿರಿ...', 'ನಿಮ್ಮಂತೋರು ಭಾರತೀಯ ಸಂಸ್ಕೃತಿ ಬಗ್ಗೆ ಮಾತಾಡ್ಬಾರದು..' ಅಂತೆಲ್ಲ ಬರೀತಾರ. ಸಾಮಾಜಿಕ ಜಾಲತಾಣಗಳಲ್ಲಿ ಹೀಗೆ ಕಣ್ಣಿಗೆ ಕಾಣದೆ ಇದ್ದುಕೊಂಡು ಏನು ಬೇಕಾದ್ರು ಮಾತಾಡೋ ಸ್ವಾತಂತ್ರ್ಯನ ಟೆಕ್ನಾಲಜಿ ಕೊಟ್ಟದ. ಆದ್ರ ನೇರ ಬಂದು ಚರ್ಚೆ ಮಾಡಕ್ಕ, ಮಾತಾಡಕ್ಕ ತುಂಬ ಧೈರ್ಯ ಬೇಕಲ್ಲ?

**◆ 'ಅರ್ಬನ್ ಫೋಕ್ ಪ್ರಾಜೆಕ್ಟ್'ನ ಮುಂದಿನ ನಡೆ ಏನು?**

ಸದ್ಯಕ್ಕ ನಾನು ಗುಲ್ಬರ್ಗದಾಗಿದ್ದುಕೊಂಡು ಹಾಡುಗಳ್ನ ಕಲೆಕ್ಟ್ ಮಾಡ್ಲಕತ್ತಿನಿ. ಯಾರು ಹಾಡ್ತಾರೋ ಅವ್ರ ಮನಿಗ್ಹೋಗಿ ಹಾಡು ಹೇಳಸ್ಕೊತೀನಿ. ಕಮ್ಯುನಿಟೀನ ಒಟ್ಟುಗೂಡಿಸೋಕ್ಕೆ ದಾರಿಗಳನ್ನ ಹುಡುಕ್ತಾ ಇದ್ದೀವಿ, ಆ ಮೂಲಕ ಅದರೊಳಗಿರಾ ಜನ್ರು ಮಾತಾಡ್ಬೇಕು. ತಮಗಿರೋ ಅಧಿಕಾರ, ಅವಕಾಶನ ಬಳಸಿ ಈ ಹಾಡ್ಗಳ್ನ ಯಾರ್‍ಯಾರೋ ತಮಗೆ ಇಷ್ಟ ಬಂದ್ಹಾಂಗ ಬಳಸ್ಯಾರ, ಇದನ್ನ ಹೇಗೆ ಮುಂದಕ್ಕೆ ತಗೊಂಡು ಹೋಗೋದು ಅಂತ ಯೋಚ್ನೆ ಮಾಡ್ತಾ ಇದೀವಿ. ಇದು ಬಿಟ್ಟು... ಈ ಹಾಡ್ಗಳ್ನ ವೇದಿಕೆ ಮ್ಯಾಲೆ ಹಾಡ್ತಾ ಹೋದ್ರ ಒಂದು ಹಂತದಾಗ ನಾವು ದುಡ್ಡು ಮಾಡ್ಕೊತಾ ಕೂತುಬಿಡ್ತೀವಿ, ಆಗ ಸಮಾಜದ ಬಗೆಗೆ ನಮ್ಮೊಳಗ ಸೂಕ್ಷ್ಮತೆ ಕಳ್ದು ಹೋಗ್ತದ. ಇದು ಎಲ್ರಿಗೂ